ಲೇಖಕ, ಅಧ್ಯಾಪಕ ಗುರುಲಿಂಗ ಕಾಪಸೆಯವರು ಜನಿಸಿದ್ದು ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಹಿರೇಲೋಣಿಯಲ್ಲಿ. ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿ ನಿವೃತ್ತರು. 'ಮಧುರಚೆನ್ನರ ಜೀವನ–ಸಾಹಿತ್ಯ', 'ಹಲಸಂಗಿ ಗೆಳೆಯರು', 'ಸಾಹಿತ್ಯ ಸಂಬಂಧ', 'ಶ್ರೀಅರವಿಂದರು', 'ಶಾಲ್ಮಲೆಯಿಂದ ಗೋದಾವರಿಯವರೆಗೆ', 'ಕನ್ನಡ ಮರಾಠಿ ಬಾಂಧವ್ಯ', 'ಭವ್ಯ ಮಾನವ ಕಾವ್ಯದರ್ಶನ' ಸೇರಿದಂತೆ ನಲವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ. 'ಅಕ್ಕಮಹಾದೇವಿ', 'ಸಿದ್ಧರಾಮ', 'ಬಸವೇಶ್ವರರು', 'ಶರಣರ ಸತ್ಸಂಗದಲ್ಲಿ', 'ಚಾಮರಸ', 'ಹರಿಹರನ ಐದು ರಗಳೆಗಳು' – ಇವು ಅವರ ಶರಣ ಸಾಹಿತ್ಯ ಸಂಬಂಧಿ ಪುಸ್ತಕಗಳಾಗಿವೆ.

ಕನ್ನಡ ಶಾಲೆಯ ಮಾಸ್ತರ – ವಿಶ್ವವಿದ್ಯಾಲಯ ಪ್ರಾಧ್ಯಾಪಕ – ಇವು ಶಿಕ್ಷಣ ಕ್ಷೇತ್ರದ ವಿವಿಧ ಹಂತಗಳು, ಅಂತಸ್ತುಗಳು. ಆದರೆ ದೃಷ್ಟಿ, ಧ್ಯೇಯ – ಎರಡೂ ಒಂದೇ. ನಾನು ಆಡಳಿತಾಧಿಕಾರಿಯಾಗಿದ್ದರೂ ನನ್ನಲ್ಲಿ ಶಿಕ್ಷಕನ ಮನೋಧರ್ಮ ಅಚಲವಾಗಿತ್ತು. ಮೊದಲಿನದು ಮಾಸ್ತರಿಕೆ, ವಾತ್ಸಲ್ಯ ಭಾವದ್ದು. ಪ್ರಾಧ್ಯಾಪಕತ್ವ – ಸಖ್ಯಭಾವದ್ದು. ಆಡಳಿತ, ಬಾಂಧವ್ಯ ದೃಷ್ಟಿಯದು. ಎಲ್ಲದರಲ್ಲಿಯೂ ಒಂದು ಸಾಮರಸ್ಯ ಇದ್ದೇ ಇತ್ತು. ಸೌಹಾರ್ದಭಾವ, ಸಮನ್ವಯ ದೃಷ್ಟಿ ನನ್ನ ಬದುಕಿನ ಆಸ್ತಿ. ಅದು ನನ್ನ ಬದುಕಿನ ಇಡೀ ಪಯಣವನ್ನು ರೂಪಿಸಿದ ತಾತ್ತ್ವಿಕತೆ ಕೂಡ.

● **ಹಳಗನ್ನಡದಿಂದ ಹಿಡಿದು, ಕನ್ನಡ ಸಾಹಿತ್ಯದ ಎಲ್ಲ ಘಟ್ಟಗಳ ಬಗ್ಗೆ ಆಳವಾದ ಅಧ್ಯಯನ ಮಾಡಿರುವ ನಿಮ್ಮನ್ನು ನವೋದಯ ಬಹಳ ಗಟ್ಟಿಯಾಗಿ ಹಿಡಿದುಕೊಂಡಿತಲ್ಲ, ಯಾಕೆ?**

